# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | (40+167+161) 42 |
| **ಸದಸ್ಯರ ಹೆಸರು** | : | ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ), ಶ್ರೀ ಸುನೀಲ್ ವಲ್ಯಾಪುರ್ (ವಿಧಾನ ಸಭೆಯಿಂದ ಚುನಾಯಿತರಾದವರು) ಮತ್ತು ಶ್ರೀ ಕುಶಾಲಪ್ಪ ಎಂ.ಪಿ. ಸುಜಾ, (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| **ಉತ್ತರಿಸುವ ದಿನಾಂಕ** | : | 08.12.2025 |
| **ಉತ್ತರಿಸುವವರು** | : | ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕಳೆದ 2 ವರ್ಷಗಳಲ್ಲಿ ಮಾನವ ವನ್ಯಜೀವಿ ಸಂಘರ್ಷ ನಡೆದ ಪ್ರಕರಣಗಳು ಎಷ್ಟು ಸಂಭವಿಸಿದ ಮಾನವ ಜೀವಹಾನಿ ಎಷ್ಟು; (ಜಿಲ್ಲಾವಾರು ವಿವರ ನೀಡುವುದು); ಹಾಗೂ ಪರಿಹಾರಧನ ನೀಡಿದ ಮೊತ್ತವೆಷ್ಟು ಜಿಲ್ಲಾವಾರು ಮಾಹಿತಿ ನೀಡುವುದು; ಮಾನವ ವನ್ಯಜೀವಿ ಹೆಚ್ಚಿನ ಸಂಘರ್ಷ ನಡೆಯುವ ಜಿಲ್ಲೆಗಳು ಯಾವುವು; | ರಾಜ್ಯದಲ್ಲಿ ಕಳೆದ 2 ವರ್ಷಗಳಲ್ಲಿ ಮಾನವ ವನ್ಯಜೀವಿ ಸಂಘರ್ಷ ನಡೆದ ಪ್ರಕರಣಗಳ ಸಂಖ್ಯೆ ಹಾಗೂ ಪರಿಹಾರ ನೀಡಿದ ಮೊತ್ತದ ವಿಭಾಗವಾರು ವಿವರಗಳನ್ನು **ಅನುಬಂಧ-01** ರಲ್ಲಿ ಲಗತ್ತಿಸಿದೆ.<br><br>ಮಾನವ ವನ್ಯಜೀವಿ ಸಂಘರ್ಷವು ಹೆಚ್ಚಾಗಿ ಹಾಸನ, ರಾಮನಗರ, ಮೈಸೂರು, ಕೊಡಗು, ಚಾಮರಾಜನಗರ, ಚಿಕ್ಕಮಗಳೂರು, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಕಂಡುಬರುತ್ತವೆ. |
| ಆ) | ಮಾನವ ವನ್ಯಜೀವಿ ಸಂಘರ್ಷ ತಡೆಗೆ ವೈಜ್ಞಾನಿಕ ಮಾರ್ಗದಲ್ಲಿ ಯಾವೆಲ್ಲ ಪರಿಣಾಮಕಾರಿ ಕಾರ್ಯಗಳನ್ನು ಮಾಡಲಾಗಿದೆ; ಈವರೆಗೆ ಕೈಗೊಂಡ ಅಲ್ಪಾವಧಿ ಮತ್ತು ದೀರ್ಘ ಕಾಲಿನ ಪರಿಹಾರ ಕ್ರಮಗಳು ಯಾವುವು. | ವನ್ಯಜೀವಿ ಮತ್ತು ಮಾನವ ಸಂಘರ್ಷ ನಿಯಂತ್ರಣಕ್ಕಾಗಿ ಈ ಕೆಳಕಂಡ ಅಲ್ಪಾವಧಿ ಮತ್ತು ದೀರ್ಘ ಕಾಲಿನ ಕ್ರಮಗಳನ್ನು ಕೈಗೊಳ್ಳಲಾಗಿದೆ.<br><br>**ಭೌತಿಕ ಅಡೆತಡೆಗಳ ನಿರ್ಮಾಣ:**<br>• ಕಾಡಾನೆಗಳು ಅರಣ್ಯ ಪ್ರದೇಶದಿಂದ ಹೊರಗೆ ಬಾರದಂತೆ ತಡೆಗಟ್ಟಲು ಅರಣ್ಯದಂಚಿನಲ್ಲಿ ಸೌರಶಕ್ತಿ ಬೇಲಿ ನಿರ್ಮಾಣ/ನಿರ್ವಹಣೆ, ಆನೆತಡೆ ಕಂದಕ ನಿರ್ಮಾಣ/ನಿರ್ವಹಣೆ ಮಾಡಲಾಗಿದ್ದು ಮತ್ತು ರೈಲ್ವೆ ಹಳಿಗಳನ್ನು ಉಪಯೋಗಿಸಿ ಬ್ಯಾರಿಕೇಡ್ ನಿರ್ಮಿಸುವ ಕಾಮಗಾರಿಯನ್ನು ಕೈಗೊಳ್ಳಲಾಗಿದೆ.<br>• ರಾಜ್ಯದಲ್ಲಿ ಮಾನವ-ಆನೆ ಸಂಘರ್ಷ ಹೆಚ್ಚಾಗಿರುವ ಪ್ರದೇಶಗಳಲ್ಲಿ ಕಾಡಾನೆಗಳು ಅರಣ್ಯ ಪ್ರದೇಶದಿಂದ ಹೊರಗೆ ಬಾರದಂತೆ ನಿಯಂತ್ರಿಸಲು ಉಪಯೋಗಿಸಿದ ರೈಲ್ವೆ ಹಳಿಗಳನ್ನು ಉಪಯೋಗಿಸಿಕೊಂಡು ರೈಲ್ವೆ ಬ್ಯಾರಿಕೇಡ್ ಕಾಮಗಾರಿಯನ್ನು ಕೈಗೊಳ್ಳಲಾಗುತ್ತಿದ್ದು, ಒಟ್ಟು.428 ಕಿ.ಮೀ ರೈಲ್ವೆ ಬ್ಯಾರಿಕೇಡ್ ನಿರ್ಮಿಸಲಾಗಿದೆ. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | **ಆನೆ ಕಾರ್ಯಪಡೆಗಳ ಸ್ಥಾಪನೆ:**<br>• ಸರ್ಕಾರವು ದಿನಾಂಕ:21.11.2022 ರ ಆದೇಶದಲ್ಲಿ ಹಾಸನ, ಚಿಕ್ಕಮಗಳೂರು, ಮೈಸೂರು ಮತ್ತು ಕೊಡಗು ಜಿಲ್ಲೆಗಳಲ್ಲಿ ಹಾಗೂ ದಿನಾಂಕ:01.02.2023ರ ಆದೇಶದಲ್ಲಿ ಚಾಮರಾಜನಗರ ಜಿಲ್ಲೆ, ದಿನಾಂಕ:30.06.2023 ರ ಆದೇಶದಲ್ಲಿ ರಾಮನಗರ ಹಾಗೂ ಬೆಂಗಳೂರು ಜಿಲ್ಲೆಗಳಲ್ಲಿ ಮತ್ತು ದಿನಾಂಕ:18.05.2024 ರ ಆದೇಶದಲ್ಲಿ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಕಾಡಾನೆ ಹಾವಳಿಯನ್ನು ತಡೆಗಟ್ಟಲು ಪ್ರತಿ ಜಿಲ್ಲೆಗೊಂದರಂತೆ ಅಧಿಕಾರಿ / ಸಿಬ್ಬಂದಿಗಳನ್ನೊಳಗೊಂಡ 08 ಆನೆ ಕಾರ್ಯಪಡೆ (Elephant Task Force) ನ್ನು ರಚಿಸಲಾಗಿರುತ್ತದೆ.<br>• ರಾಜ್ಯದಲ್ಲಿ ಮಾನವ- ಆನೆ ಸಂಘರ್ಷ ಉಂಟಾಗುವ ಸಂದರ್ಭಗಳಲ್ಲಿ ಕಾಡಾನೆಗಳನ್ನು ಸೆರೆಹಿಡಿಯುವ ಕಾರ್ಯಾಚರಣೆಗಾಗಿ ದುಬಾರೆ, ಮತ್ತಿಗೋಡು, ಬಳ್ಳೆ, ಹಾರಂಗಿ, ಭೀಮನಕಟ್ಟೆ ಮತ್ತು ರಾಮಾಪುರ ಆನೆ ಶಿಬಿರಗಳಲ್ಲಿನ ಪಳಗಿದ ಆನೆಗಳನ್ನು ಬಳಸಿಕೊಂಡು ನುರಿತ ಪಶು ವೈದ್ಯಾಧಿಕಾರಿ, ಮಾವುತ ಹಾಗೂ ಇತರೆ ಸಿಬ್ಬಂದಿಗಳೊಳಗೊಂಡ ಮೂರು ತಂಡಗಳನ್ನು ರಚಿಸಲಾಗಿರುತ್ತದೆ. ಸದರಿ ತಂಡವು ರಾಜ್ಯದ ಯಾವುದೇ ಭಾಗದಿಂದ ಕಾಡಾನೆ ಸೆರೆಹಿಡಿಯುವ ಕಾರ್ಯಾಚರಣೆಗೆ ಬೇಡಿಕೆ ಬಂದಾಗ ಈ ತಂಡಗಳಲ್ಲಿ ಒಂದ ತಂಡವನ್ನು ಕಾರ್ಯಾಚರಣೆಗೆ ನಿಯೋಜಿಸಲಾಗುತ್ತಿದೆ.<br><br>**ಚಿರತೆ ಕಾರ್ಯಪಡೆಗಳ ಸ್ಥಾಪನೆ:**<br>• ಸರ್ಕಾರವು ದಿನಾಂಕ: 31.01.2023ರ ಆದೇಶದಲ್ಲಿ ಮೈಸೂರು ವೃತ್ತದ ಮೈಸೂರು / ನಂಜನಗೂಡು / ಹೆಚ್.ಡಿ.ಕೋಟೆ / ಸರಗೂರು / ಟಿ.ನರಸೀಪುರ / ಮಂಡ್ಯ / ಪಾಂಡವಪುರ / ನಾಗಮಂಗಲ ವ್ಯಾಪ್ತಿಯಲ್ಲಿ ಚಿರತೆ ಹಾವಳಿ ಹೆಚ್ಚಾಗಿರುವ ಪ್ರದೇಶಗಳಲ್ಲಿ ಚಿರತೆ ಹಾವಳಿ ನಿಭಾಯಿಸುವ ನಿಟ್ಟಿನಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ವಿಭಾಗ, ಮೈಸೂರು ಇವರ ನೇತೃತ್ವದಲ್ಲಿ ಚಿರತೆ ಕಾರ್ಯಪಡೆ (Leopard Task Force) ರಚಿಸಲಾಗಿದೆ. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯಪಡೆ ಮುಖ್ಯಸ್ಥರು) ಬೆಂಗಳೂರು ರವರ ಅಧಿಕೃತ ಜ್ಞಾಪನಾ ಪತ್ರ ದಿನಾಂಕ: 24.11.2023ರಲ್ಲಿ ಬೆಂಗಳೂರು ಜಿಲ್ಲೆಯ ಕಗ್ಗಲೀಪುರ / ಆನೇಕಲ್ಲು / ಯಲಹಂಕ / ಹೊಸಕೋಟೆ / ಕೆ.ಆರ್.ಪುರಂ ವಲಯಗಳ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಚಿರತೆ ಹಾವಳಿ ನಿಭಾಯಿಸುವ ನಿಟ್ಟಿನಲ್ಲಿ ಚಿರತೆ ಕಾರ್ಯಪಡೆಯನ್ನು ರಚಿಸಲಾಗಿದೆ. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | • **ಜಲ ಸಂಪನ್ಮೂಲ ಅಭಿವೃದ್ಧಿ:** ವನ್ಯಪ್ರಾಣಿಗಳಿಗಾಗಿ ಅರಣ್ಯ ಪ್ರದೇಶಗಳ ಒಳಗೆ ನೀರಿನ ಲಭ್ಯತೆ ಹೆಚ್ಚಿಸಲು ರಕ್ಷಿತಾರಣ್ಯಗಳಲ್ಲಿ ಕೆರೆಗಳ ನಿರ್ಮಾಣ ಹಾಗೂ ಪುನಶ್ಚೇತನ ಗೊಳಿಸಿ ವನ್ಯಪ್ರಾಣಿಗಳ ಆವಾಸ ಸ್ಥಾನವನ್ನು ಅಭಿವೃದ್ಧಿ ಗೊಳಿಸಲಾಗುತ್ತಿದೆ. ಇದರಿಂದ ಕಾಡಾನೆ ಹಾಗೂ ಇತರೆ ವನ್ಯಪ್ರಾಣಿಗಳು ಕಾಡಿನಿಂದ ಹೊರಗೆ ಬಾರದಂತೆ ತಡೆಯಲಾಗುತ್ತಿದೆ.<br><br>**ಆವಾಸ ಸ್ಥಾನ ಅಭಿವೃದ್ಧಿ:**<br>• ಅರಣ್ಯ ಪ್ರದೇಶಗಳಲ್ಲಿ ಹುಲ್ಲುಗಾವಲು ಸಂರಕ್ಷಣೆ ಹಾಗೂ ಅಭಿವೃದ್ಧಿಗೊಳಿಸಲು ಹೆಚ್ಚಿನ ಅರಣ್ಯ ಪ್ರದೇಶಗಳಲ್ಲಿ ದಟ್ಟವಾಗಿ ಬೆಳೆದ ಲಂಟಾನ ಮತ್ತು ಯುಪಟೋರಿಯಂ ಕಳೆಗಳಿಂದಾಗಿ ಹುಲ್ಲಿನ ಬೆಳವಣಿಗೆಗೆ ತೀವ್ರ ಅಡಚಣೆಯಾಗಿ ಅರಣ್ಯದಲ್ಲಿ ಹುಲ್ಲಿನ ಲಭ್ಯತೆ ಗಣನೀಯವಾಗಿ ಕಡಿಮೆಯಾಗಿರುವುದರಿಂದ ಹುಲ್ಲು ಬೆಳೆಯುವ ಪ್ರದೇಶಗಳಲ್ಲಿ ಬೆಳೆದಿರುವ ಲಂಟಾನ ಮತ್ತು ಯುಪಟೋರಿಯಂ ಕಳೆಗಳನ್ನು ಕಿತ್ತು ಸ್ವಚ್ಛಗೊಳಿಸಿ ಅರಣ್ಯಕ್ಕೆ ಪೂರಕವಾದ ಹುಲ್ಲು ಬೆಳೆಯಲು ಅನುವು ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.<br>• ಆನೆಗಳು ಮತ್ತು ಇತರೆ ವನ್ಯಪ್ರಾಣಿಗಳು ಒಂದು ಅರಣ್ಯ ಪ್ರದೇಶದಿಂದ ಇನ್ನೊಂದು ಅರಣ್ಯ ಪ್ರದೇಶಕ್ಕೆ ಅಡೆತಡೆ ಇರದಂತೆ ಸಂಚರಿಸಲು ಅನುಕೂಲವಾಗುವಂತೆ ವನ್ಯಜೀವಿ ಕಾರಿಡಾರ್ (Wildlife Corridor) ಅನುಷ್ಠಾನಗೊಳಿಸಬೇಕಾಗಿರುತ್ತದೆ, ಇದಕ್ಕಾಗಿ ತಯಾರಿಸಿರುವ ವನ್ಯಜೀವಿ ಕಾರಿಡಾರ್ (Wildlife Corridor) ಪಾಲಿಸಿಯ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ.<br><br>**ತ್ವರಿತ ಕಾರ್ಯಾಚರಣೆ:**<br>• ಆನೆ ಕಾರ್ಯಪಡೆ (ETF) ಮತ್ತು ಚಿರತೆ ಕಾರ್ಯಪಡೆ (LTF) ಗಳಿಗೆ 24X7 ಕಾರ್ಯ ನಿರ್ವಹಿಸಲು ನಿಯಂತ್ರಣ ಕೊಠಡಿಯನ್ನು ಸ್ಥಾಪಿಸಿದ್ದು, ನಿಯಂತ್ರಣ ಕೊಠಡಿಗೆ ಬರುವ ಕರೆಗಳಿಗೆ ಸ್ಪಂದಿಸಿ ಕೂಡಲೇ ಕ್ರಮವಹಿಸಲಾಗುತ್ತಿದೆ.<br>• ಚಿರತೆ / ಹುಲಿ ಹಾವಳಿ ಹೆಚ್ಚಾಗಿರುವ ಸೂಕ್ಷ್ಮ ಪ್ರದೇಶಗಳಲ್ಲಿ ಬೋನುಗಳನ್ನು ಇರಿಸಿ ಸೆರೆ ಹಿಡಿದು, ಸೂಕ್ತ ಆವಾಸಸ್ಥಾನಕ್ಕೆ ಸ್ಥಳಾಂತರಿಸಲು ಕ್ರಮವಹಿಸಲಾಗುತ್ತಿದೆ.<br>• ಕಾಡಾನೆ ಹಾವಳಿ ತುರ್ತು ನಿರ್ವಹಣೆಗಾಗಿ ಕ್ಷಿಪ್ರ ಕಾರ್ಯಪಡೆ ತಂಡಗಳನ್ನು (RRT) ರಚಿಸಿ ನಿರ್ವಹಿಸಲಾಗುತ್ತಿದೆ.<br>• ಕಾಡಾನೆ ಹಿಮ್ಮೆಟ್ಟಿಸುವ ತಂಡಗಳನ್ನು ರಚಿಸಿ ಕಾಡಾನೆಗಳನ್ನು ಕಾಡಿಗೆ ಹಿಮ್ಮೆಟ್ಟಿಸುವ |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | ಕಾರ್ಯ ಕೈಗೊಳ್ಳಲಾಗುತ್ತಿದೆ.<br>• ನಿಸ್ತಂತು ಜಾಲದ ಮೂಲಕ ಮಾಹಿತಿ ಸಂವಹನ ಮಾಡಲಾಗುತ್ತಿದೆ.<br>• ಕಾಡಾನೆಗಳ ಮಾಹಿತಿಯನ್ನು ಸಂಗ್ರಹಿಸಲು 24 ಗಂಟೆ ಕಾರ್ಯನಿರ್ವಹಿಸುವ ಮಾಹಿತಿ ಕೇಂದ್ರ ಸ್ಥಾಪಿಸಲಾಗಿದೆ.<br>• ಕಾಡಾನೆ ಗುಂಪಿನಲ್ಲಿದ್ದ ವಯಸ್ಸ ಹೆಣ್ಣಾನೆಯನ್ನು ಗುರುತಿಸಿ ಅದಕ್ಕೆ ರೇಡಿಯೋ ಕಾಲರ್ ಅಳವಡಿಸಿ ಆನೆಗಳ ಚಲನ-ವಲನಗಳ ಬಗ್ಗೆ ಎಸ್.ಎಂ.ಎಸ್. ಹಾಗೂ ವಾಟ್ಸಾಪ್ ಮೂಲಕ ಜನರಿಗೆ ಮಾಹಿತಿಯನ್ನು ನೀಡಿ ಮಾನವ ಪ್ರಾಣಹಾನಿ ಹಾಗೂ ಮಾನವ ಗಾಯ ತಪ್ಪಿಸಲು ಕ್ರಮ ವಹಿಸಲಾಗುತ್ತಿದೆ.<br>• ಸಾರ್ವಜನಿಕರಿಗೆ ಉಪಟಳ ನೀಡುತ್ತಿರುವ ಪುಂಡಾನೆಗಳನ್ನು ಗುರುತಿಸಿ, ಸೆರೆಹಿಡಿದು ಆಗ್ಗಿಂದಾಗ್ಗೆ ಆನೆ ಶಿಬಿರಗಳಿಗೆ ಸ್ಥಳಾಂತರಿಸಲಾಗಿದೆ.<br>• ವನ್ಯಪ್ರಾಣಿಗಳ ಹಾವಳಿ ಹೆಚ್ಚಾಗಿರುವ ಪ್ರದೇಶಗಳಲ್ಲಿ ಈಗಾಗಲೇ ರಚಿಸಿರುವ RRT, ADC, ಮತ್ತು ETF ಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ತಂಡಗಳನ್ನು ಒಟ್ಟುಗೂಡಿಸಿ ಮಾನವ-ವನ್ಯಜೀವಿ ಸಂಘರ್ಷ ಉಪ ತಂಡಗಳಾಗಿ ರಚಿಸಿ ಆಯ್ದ ಸ್ಥಳಗಳಲ್ಲಿ ನಿಯೋಜಿಸಲಾಗಿದೆ.<br>• ಸರ್ಕಾರದ ಆದೇಶ ಸಂಖ್ಯೆ: ಅಪಜೀ 96 ಎಫ್.ಡಬ್ಲ್ಯು.ಎಲ್. 2016 ದಿನಾಂಕ: 01.10.2016 ರಲ್ಲಿ ಮಾನವ ಪ್ರಾಣಕ್ಕೆ ಅಥವಾ ಸ್ವತ್ತಿಗೆ ಅಪಾಯಕಾರಿಯಾಗಿರುವ ಹಾಗೂ ಬೆಳೆನಾಶ ಮಾಡುವ ಕಾಡು ಹಂದಿಗಳನ್ನು ಷರತ್ತುಬದ್ಧವಾಗಿ ಕೊಲ್ಲಲು ಅನುಮತಿ ನೀಡುವ ಬಗ್ಗೆ ಆದೇಶಿಸಲಾಗಿದೆ.<br><br>**ಅರಿವು ಮೂಡಿಸಲು:**<br>• ಕಾಡಾನೆಗಳ ಹಾವಳಿ ಹೆಚ್ಚಾಗಿರುವ ಪ್ರದೇಶದಲ್ಲಿ ಜನ ಸಂಪರ್ಕ ಸಭೆಯನ್ನು ಕರೆದು ಜನರಲ್ಲಿ ಅರಿವು ಮೂಡಿಸಲಾಗುತ್ತಿದೆ.<br>• ಶಾಲಾಮಕ್ಕಳಿಗೆ ಅರಿವು ಮೂಡಿಸಲು "ಚಿಣ್ಣರ ವನದರ್ಶನ" ಕಾರ್ಯಕ್ರಮ ಕೈಗೊಳ್ಳಲಾಗುತ್ತಿದೆ.<br><br>**ಸಹಾಯ ಧನ:**<br>• ರೈತರಿಗೆ ಸಬ್ಸಿಡಿ ದರದಲ್ಲಿ ಸೋಲಾರ್ ಬೇಲಿ ನಿರ್ಮಾಣ ಮಾಡಲು ಉತ್ತೇಜನ ನೀಡಲಾಗುತ್ತಿದೆ ಹಾಗೂ ಅರಣ್ಯದ ಅಂಚಿನಲ್ಲಿ ಬರುವ ಖಾಸಗಿ ಜಮೀನುಗಳ ಸುತ್ತಾ ಸರಕಾರದ ವತಿಯಿಂದ ದೊರಕುವ ಶೇ. 50 ಸಬ್ಸಿಡಿಯನ್ನು ಬಳಸಿಕೊಂಡು ಸೌರಶಕ್ತಿ ಬೇಲಿಯನ್ನು ನಿರ್ಮಿಸಲಾಗುತ್ತಿದೆ.<br>• ರಕ್ಷಿತ ಅರಣ್ಯ ಪ್ರದೇಶಗಳ ಕಾಡಂಚಿನ ಆಯ್ದ |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | ಗ್ರಾಮಗಳಿಗೆ ಎಲ್ ಪಿ ಜಿ ಗ್ಯಾಸ್, ಸೋಲಾರ್ ದೀಪಗಳನ್ನು ಇಲಾಖೆಯ ವತಿಯಿಂದ ನೀಡಲಾಗುತ್ತಿದೆ.<br>• ರಕ್ಷಿತ ಅರಣ್ಯ ಪ್ರದೇಶಗಳ ಕಾಡಂಚಿನ ಆಯ್ದ ಗ್ರಾಮಗಳಿಗೆ Cattle Shed ನಿರ್ಮಾಣ ಮಾಡಲು ಸಹಾಯ ಮಾಡಲಾಗುತ್ತಿದೆ.<br><br>**ತಂತ್ರಜ್ಞಾನ ಬಳಕೆ:**<br><br>• ಮಾನವ- ಆನೆ ಸಂಘರ್ಷ ಹೆಚ್ಚಿರುವ 10 ಜಿಲ್ಲೆಗಳಲ್ಲಿ **"ಆನೆ ಎಲ್ಲಿ"** ಎಂಬ ತಂತ್ರಜ್ಞಾನ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. ಈ ವ್ಯವಸ್ಥೆಯು ಸಾರ್ವಜನಿಕ ದೂರುಗಳು, ಗಸ್ತು ತಿರುಗುವಿಕೆ ಮುಂತಾದ ವಿವಿಧ ಮಾಹಿತಿಗಳ ಮೂಲಕ ಒಂದು ಪ್ರದೇಶದಲ್ಲಿ ಆನೆಗಳ ಚಲನವಲನವನ್ನು ಮೇಲ್ವಿಚಾರಣೆ ಮಾಡುತ್ತದೆ. ಈ ಮಾಹಿತಿಯು ಆನೆಗಳ ಚಲನವಲನದ ಮಾದರಿಯನ್ನು ಪತ್ತೆಹಚ್ಚಲು ಮತ್ತು ಸಾರ್ವಜನಿಕರಿಗೆ ಮುಂಚಿನ ಎಚ್ಚರಿಕೆ ಸಂದೇಶಗಳನ್ನು ಕಳುಹಿಸಲು ಸಹಾಯ ಮಾಡುತ್ತಿದೆ. ಮುಂದುವರೆದು, ವಿವಿಧ ವಿಭಾಗಗಳಿಂದ ಲಭ್ಯವಾಗುವ ಮಾಹಿತಿಯನ್ನು ರಿಯಲ್-ಟೈಮ್‌ನಲ್ಲಿ ಸಂಗ್ರಹಿಸಿ, ವಿಶ್ಲೇಷಿಸಿ, ಸೂಕ್ತ ನಿರ್ಧಾರಗಳನ್ನು ಕೈಗೊಳ್ಳಲು ಹಾಗೂ ಕ್ಷೇತ್ರ ಮಟ್ಟದ ಚಟುವಟಿಕೆಗಳನ್ನು ಸಮನ್ವಯಗೊಳಿಸಲು, ಕೇಂದ್ರ ಸ್ಥಾನದಲ್ಲಿ **ಸಂಯೋಜಿತ ಕಮಾಂಡ್ ಅಂಡ್ ಕಂಟ್ರೋಲ್ ಸೆಂಟರ್(ICCC)** ಹಾಗೂ 11 ವಿಭಾಗಗಳಲ್ಲಿ **ವಿಭಾಗೀಯ ಕಮಾಂಡ್ ಅಂಡ್ ಕಂಟ್ರೋಲ್ ಸೆಂಟರ್(DCCC)** ಸ್ಥಾಪಿಸಲಾಗುತ್ತಿದೆ.<br>• ರೇಡಿಯೋ ಕಾಲರ್ ಅಳವಡಿಸಿರುವ ಕಾಡಾನೆ, ಹುಲಿ, ಚಿರತೆಗಳ ಚಲನ-ವಲನಗಳನ್ನು ದಿನನಿತ್ಯ ಗಮನಿಸಲು ಇಲಾಖಾವತಿಯಿಂದ "ಹೆಜ್ಜೆ" ಎಂಬ ಡ್ಯಾಶ್ ಬೋರ್ಡ್ ನ್ನು ತಯಾರಿಸಲಾಗಿದೆ.<br>• ಕಾಡಂಚಿನ ಗ್ರಾಮಗಳಲ್ಲಿ ವನ್ಯಪ್ರಾಣಿಗಳು ಬಂದಂತಹ ಸಂದರ್ಭಗಳಲ್ಲಿ ಸಾರ್ವಜನಿಕರಿಗೆ ಎಚ್ಚರಿಕೆ/ ಮಾಹಿತಿ ನೀಡಲು Advance alert system ಅನ್ನು ತಯಾರಿಸಲಾಗಿದೆ. ಇದರಿಂದಾಗಿ ಸಾರ್ವಜನಿಕರಿಗೆ ನೇರವಾಗಿ ಸಂದೇಶಗಳನ್ನು ಕಳುಹಿಸಲಾಗುತ್ತಿದೆ.<br>• ಕಾಡಾನೆ ಇರುವ ಪ್ರದೇಶಗಳಲ್ಲಿ ಸಾರ್ವಜನಿಕರಿಗೆ ಎಚ್ಚರಿಕೆ/ ಮಾಹಿತಿ ನೀಡಲು ಡಿಜಿಟಲ್ ಬೋರ್ಡ್‌ಗಳನ್ನು ಅಳವಡಿಸಲಾಗಿದೆ.<br>• ಅರಣ್ಯದಂಚಿನ ಆಯ್ದ ಪ್ರದೇಶಗಳಲ್ಲಿ **"AI"** Based Camera ಗಳನ್ನು ಅಳವಡಿಸಲಾಗಿದ್ದು, ವನ್ಯಪ್ರಾಣಿಗಳ ಚಲನ-ವಲನಗಳನ್ನು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | ಗಮನಿಸಲಾಗುತ್ತಿದೆ.<br>• ಡ್ರೋನ್‌ಗಳ ಮುಖಾಂತರ ವನ್ಯಪ್ರಾಣಿಗಳ ಚಲನ-ವಲನಗಳನ್ನು ಗಮನಿಸಲಾಗುತ್ತಿದೆ.<br><br>• **ಇ-ಪರಿಹಾರ:** ಈ ಆನ್‌ಲೈನ್ ಆಪ್ಲಿಕೇಶನ್ ಬೆಳೆ, ಆಸ್ತಿ ಮತ್ತು ಜೀವಹಾನಿಗಳಿಗೆ ಪರಿಹಾರದ ಪ್ರಕರಣಗಳನ್ನು ಪ್ರಕ್ರಿಯೆಗೊಳಿಸುತ್ತದೆ, ಪರಿಹಾರ ಪ್ರಕ್ರಿಯೆಯನ್ನು ಸುಗಮಗೊಳಿಸುತ್ತದೆ ಮತ್ತು ಆಡಳಿತ ವಿಳಂಬವನ್ನು ಕಡಿಮೆ ಮಾಡುತ್ತದೆ. ಆಪ್ಲಿಕೇಶನ್ ನಲ್ಲಿ ದಾಖಲಿಸಲಾದ Backend Data ದಿಂದ ಸಂಘರ್ಷದ ಕಾರಣಗಳು, ಹೆಚ್ಚಿನ ಸಂಘರ್ಷದ ಪ್ರದೇಶಗಳು ಮತ್ತು ಸಂಘರ್ಷ-ಉಂಟುಮಾಡುವ ಪ್ರಾಣಿಗಳನ್ನು ವಿಶ್ಲೇಷಿಸಲು ಸಹಾಯ ಮಾಡುತ್ತದೆ.<br>• ಮಾನವ- ವನ್ಯಜೀವಿ ಸಂಘರ್ಷ ತಡೆಗಟ್ಟಲು 05 ವರ್ಷಗಳ ಸ್ಟ್ರಾಟೆಜಿಕ್ ಪ್ಲಾನ್ ತಯಾರಿಸಿ ಸರ್ಕಾರದ ಅನುಮೋದನೆಗಾಗಿ ಸಲ್ಲಿಸಲಾಗಿದೆ. |
| ಇ) | ಮಾನವ ವನ್ಯಜೀವಿ ಸಂಘರ್ಷ ತಡೆಯಲು ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ ಇಲಾಖಾವತಿಯಿಂದ ಯಾವ ಯಾವ ಸೌಲಭ್ಯಗಳನ್ನು ನೀಡಲಾಗಿದೆ (ಜಿಲ್ಲಾವಾರು ಮಾಹಿತಿ ನೀಡುವುದು) | ಮಾನವ-ವನ್ಯಜೀವಿ ಸಂಘರ್ಷ ತಡೆಗಟ್ಟಲು ಇಲಾಖಾ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ನೀಡಲಾದ ಸಲಕರಣೆಗಳ ವಿವರಗಳನ್ನು **ಅನುಬಂಧ-02**ರಲ್ಲಿ ಲಗತ್ತಿಸಿದೆ. |
| ಈ) | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆನೆ ಹಾವಳಿಯನ್ನು ತಡೆಗಟ್ಟಲು ಆನೆ ನಿಗ್ರಹ ಪಡೆಯನ್ನು (ETF) ರಚಿಸಲಾಗುವುದು ಎಂಬುದಾಗಿ ಘೋಷಿಸಿದ್ದರೂ, ಇವರೆಗೂ ಕ್ರಮಕೈಗೊಳ್ಳದಿರಲು ಕಾರಣವೇನು; ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆನೆ: ನಿಗ್ರಹಪಡೆಯನ್ನು ಯಾವ ಅವಧಿಯೊಳಗೆ ರಚಿಸಲಾಗುವುದು; ಈ ವರೆಗೆ ಕೈಗೊಂಡ ಕ್ರಮಗಳೇನು ವಿವರ ಒದಗಿಸುವುದು; | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆನೆ ಹಾವಳಿಯನ್ನು ತಡೆಗಟ್ಟಲು ಆನೆ ಕಾರ್ಯ ಪಡೆಯನ್ನು (ETF) ರಚಿಸುವ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ. |
| ಉ) | ಸಸ್ಯಹಾರಿ ಪ್ರಾಣಿಗಳಿಗೆ ಕಾಡಿನಲ್ಲಿ ಬೇಕಾದಷ್ಟು ಆಹಾರ ಸಿಗುವಂತಾಗಲು ಇಲಾಖೆಯಿಂದ ಯಾವ ಕ್ರಮಕೈಗೊಳ್ಳಲಾಗಿದೆ :ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಏನೇನು ಕ್ರಮಕೈಗೊಳ್ಳಲಾಗಿದೆ' (ತಾಲ್ಲೂಕುವಾರು ವಿವರ ಒದಗಿಸುವುದು) | ವನ್ಯಪ್ರಾಣಿಗಳಿಗೆ ಆಹಾರ ಮತ್ತು ನೀರಿನ ಲಭ್ಯತೆಗಾಗಿ ಸಂರಕ್ಷಿತ ಪ್ರದೇಶಗಳಲ್ಲಿ ಹುಲ್ಲುಗಾವಲು ಸಂರಕ್ಷಣೆ ಹಾಗೂ ಅಭಿವೃದ್ಧಿಗೊಳಿಸಿ ಹುಲ್ಲು ಬೆಳೆಯಲು ಹಾಗೂ ಅರಣ್ಯ ಪ್ರದೇಶಗಳ ಒಳಗೆ ನೀರಿನ ಲಭ್ಯತೆ ಹೆಚ್ಚಿಸಲು ರಕ್ಷಿತಾರಣ್ಯಗಳಲ್ಲಿ ಕೆರೆಗಳ ನಿರ್ಮಾಣ ಹಾಗೂ ಪುನಶ್ಚೇತನ ಗೊಳಿಸಿ ವನ್ಯಪ್ರಾಣಿಗಳ ಆವಾಸ ಸ್ಥಾನವನ್ನು ಅಭಿವೃದ್ಧಿ ಗೊಳಿಸಲಾಗುತ್ತಿದೆ.<br><br>ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯಲ್ಲಿ ಸಸ್ಯಹಾರಿ ಪ್ರಾಣಿಗಳಿಗೆ ಕಾಡಿನ ಪ್ರದೇಶಗಳಲ್ಲಿ |

| ಕ್ರ, ಸಂ | ಪ್ರಶ್ನೆ | ಉತ್ತರ |
|---|---|---|
| | | ನೆಡುತೋಪು ಕಾಮಗಾರಿಗಳನ್ನು ನಿರ್ವಹಿಸುವ ಸಮಯದಲ್ಲಿ, ಮಾವು, ಹಲಸು, ನೇರಳೆ, ಪುನರ್ಪುಳಿ ಮತ್ತು ಇತರೆ ಹಣ್ಣು ಬಿಡುವ ಜಾತಿಯ ಗಿಡಗಳನ್ನು ನೆಡಲು ಕ್ರಮಕೈಗೊಳ್ಳಲಾಗುತ್ತಿದೆ. |
| ಊ) | ಕಲಬುರಗಿ ಜಿಲೆಯಲ್ಲಿ ಕಾಡು ಹಂದಿ ಮತ್ತಿತರ ವನ್ಯಜೀವಿಗಳಿಂದ ಬೆಳೆ ಹಾನಿಯಾಗುತ್ತಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದಯ ಬಂದಿದ್ದಲ್ಲಿ ಸರ್ಕಾರ ಯಾವ ಕ್ರಮ ಕೈಗೊಂಡಿದೆ; (ಸಂಪೂರ್ಣ ವಿವರ ನೀಡುವುದು) | ಕಲಬುರಗಿ ಜಿಲ್ಲೆಯಲ್ಲಿ ಅರಣ್ಯದಂಚಿನ ಹೊಲಗದ್ದೆಗಳಲ್ಲಿ ಬೆಳೆದ ಬೆಳೆಗಳನ್ನು ಕಾಡುಪ್ರಾಣಿಗಳು ನಾಶ ಮಾಡುತ್ತಿರುವುದನ್ನು ತಡೆಗಟ್ಟಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.<br>1. ವನ್ಯಜೀವಿಗಳಿಂದ ಬೆಳೆಹಾನಿ ತಡೆಯಲು ಸೋಲಾರ ತಂತಿ ಬೇಲಿ ಅಳವಡಿಸಲು ರೈತರಿಗೆ 50:50 ಅನುಪಾತದಲ್ಲಿ ಸಹಾಯ ಧನ ನೀಡಲಾಗುತ್ತಿದೆ.<br>2. ರೈತರ ಜಮೀನುಗಳಿಗೆ ನುಗ್ಗುವ ಕಾಡು ಹಂದಿಗಳನ್ನು ಸೆರೆಹಿಡಿದು ಮರಳಿ ಅರಣ್ಯಕ್ಕೆ ಬಿಡಲು ವಿಶಿಷ್ಟ ಪಂಜರಗಳ ತಯಾರಿಕೆ ಮಾಡಲಾಗಿದೆ.<br>3. ಜನವಸತಿ ಪ್ರದೇಶಗಳಿಗೆ ಬಂದ ಮಂಗಗಳು ಮತ್ತು ಲಂಗೂರಗಳ ಸ್ಥಳಾಂತರ (Translocation of Monkeys and Langur) ಮಾಡಲಾಗುತ್ತಿದೆ.<br>4. ವನ್ಯಜೀವಿಗಳ ದಾಳಿಯಿಂದ ರೈತರಿಗೆ ಉಂಟಾಗುವ ಬೆಳೆ ಹಾನಿ, ಜಾನುವಾರು ಹಾನಿ ಹಾಗೂ ಮಾನವ ಗಾಯ/ಪ್ರಾಣಹಾನಿಗೆ ಇಲಾಖೆಯಿಂದ ಪರಿಹಾರ ಧನ ನೀಡಲಾಗುತ್ತಿದೆ.<br>5. ಕಲಬುರಗಿ ಜಿಲ್ಲೆಯಲ್ಲಿ 2023-24ನೇ ಸಾಲಿನಲ್ಲಿ 37.57 ಲಕ್ಷ ಮತ್ತು 2024-25ನೇ ಸಾಲಿನಲ್ಲಿ 3.32 ಲಕ್ಷ ಒಟ್ಟು ರೂ. 40.89 ಲಕ್ಷಗಳ ಪರಿಹಾರ ಧನ ನೀಡಲಾಗಿರುತ್ತದೆ.<br>6. ಸಾರ್ವಜನಿಕ ಪ್ರದೇಶದಲ್ಲಿ ವನ್ಯಜೀವಿಗಳ ಚಲನ-ವಲನದ ಬಗ್ಗೆ ಡಂಗೂರ ಸಾರುವುದು/ಭಿತ್ತಿ ಪತ್ರಗಳ ಮೂಲಕ ಜನರಲ್ಲಿ ಜಾಗ್ರುತೆ ಮೂಡಿಸಲಾಗುತ್ತಿದೆ. |

**ಸಂಖ್ಯೆ: ಅಪಜೀ 320 ಎಫ್‌ಡಬ್ಲ್ಯೂಎಲ್ 2025**

(ಈಶ್ವರ ಬಿ.ಖಂಡ್ರೆ)
ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು

FEE 320 FWL 2025

320 FWL 2025

ಅನುಬಂಧ-01

| ಕ್ರ ಸಂ | ವಿಭಾಗ | 2023-24 | | | | | | | | 2024-25 | | | | | | | |
|---|---|---|---|---|---|---|---|---|---|---|---|---|---|---|---|---|---|
| | | ಮಾನವ ಪ್ರಾಣಹಾನಿ | | ಶಾಶ್ವತ ಅಂಗವಿಕಲತೆ | | ಭಾಗಶಃ ಅಂಗವಿಕಲತೆ | | ಮಾನವ ಗಾಯ | | ಮಾನವ ಪ್ರಾಣಹಾನಿ | | ಶಾಶ್ವತ ಅಂಗವಿಕಲತೆ | | ಭಾಗಶಃ ಅಂಗವಿಕಲತೆ | | ಮಾನವ ಗಾಯ | |
| | | ಪ್ರಕರಣಗಳ ಸಂಖ್ಯೆ | ಪಾವತಿಸಿದ ಮೊತ್ತ | ಪ್ರಕರಣಗಳ ಸಂಖ್ಯೆ | ಪಾವತಿಸಿದ ಮೊತ್ತ | ಪ್ರಕರಣಗಳ ಸಂಖ್ಯೆ | ಪಾವತಿಸಿದ ಮೊತ್ತ | ಪ್ರಕರಣಗಳ ಸಂಖ್ಯೆ | ಪಾವತಿಸಿದ ಮೊತ್ತ | ಪ್ರಕರಣಗಳ ಸಂಖ್ಯೆ | ಪಾವತಿಸಿದ ಮೊತ್ತ | ಪ್ರಕರಣಗಳ ಸಂಖ್ಯೆ | ಪಾವತಿಸಿದ ಮೊತ್ತ | ಪ್ರಕರಣಗಳ ಸಂಖ್ಯೆ | ಪಾವತಿಸಿದ ಮೊತ್ತ | ಪ್ರಕರಣಗಳ ಸಂಖ್ಯೆ | ಪಾವತಿಸಿದ ಮೊತ್ತ |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 |
| ಬೆಂಗಳೂರು ವೃತ್ತ | | | | | | | | | | | | | | | | | |
| 1 | ಬೆಂಗಳೂರು ನಗರ | - | - | - | - | - | - | 2 | 89,124 | 1 | 15,00,000 | - | - | - | - | - | - |
| 2 | ಬೆಂಗಳೂರು ಗ್ರಾಮಾಂತರ | - | - | - | - | - | - | - | - | - | - | - | - | - | - | 1 | 9,528 |
| 3 | ರಾಮನಗರ | 4 | 60,00,000 | | | | - | 21 | 8,10,000 | - | | 1 | 32,000 | 1 | 24,615 | 24 | 10,90,000 |
| 4 | ಕೋಲಾರ | - | - | - | - | - | - | 1 | 22,000 | 4 | 60,00,000 | - | - | - | - | - | - |
| 5 | ಚಿಕ್ಕಬಳ್ಳಾಪುರ | 1 | 15,00,000 | - | | - | - | 1 | 60,000 | - | - | - | - | - | | - | |
| 6 | ಬನ್ನೇರುಘಟ್ಟ | 5 | 75,00,000 | - | | - | - | 3 | 85,000 | 3 | 45,00,000 | 1 | 10,00,000 | | - | 2 | 80,000 |
| | ಒಟ್ಟು | 10 | 1,50,00,000 | - | | - | - | 28 | 10,66,124 | 8 | 1,20,00,000 | 2 | 10,32,000 | 1 | 24,615 | 27 | 11,79,528 |
| ಬೆಳಗಾಂ ವೃತ್ತ | | | | | | | | | | | | | | | | | |
| 1 | ಬೆಳಗಾಂ | - | - | - | - | - | - | 2 | 2,65,525 | - | - | - | - | - | - | - | - |
| 2 | ಗೋಕಾಕ್ | - | - | - | - | - | - | 1 | 60,000 | 1 | 15,00,000 | - | - | - | - | 2 | 1,00,000 |
| 3 | ಬಾಗಲಕೋಟೆ | - | - | - | - | - | - | 3 | 1,29,000 | - | - | 1 | 10,00,000 | - | | - | - |
| 4 | ವಿಜಯಪುರ | - | - | - | - | - | - | - | - | - | - | - | - | 1 | 4,79,732 | 1 | 60,000 |
| | ಒಟ್ಟು | - | - | - | - | - | - | 6 | 4,54,525 | 1 | 15,00,000 | 1 | 10,00,000 | 1 | 4,79,732 | 3 | 1,60,000 |
| ಬಳ್ಳಾರಿ ವೃತ್ತ | | | | | | | | | | | | | | | | | |
| 1 | ಬಳ್ಳಾರಿ | - | - | - | - | - | - | 2 | 90,000 | - | - | - | - | - | - | 2 | 1,15,000 |
| 2 | ವಿಜಯನಗರ | - | - | - | - | - | - | 12 | 5,05,000 | - | - | - | - | - | - | 5 | 3,12,883 |
| 3 | ಚಿತ್ರದುರ್ಗ | - | - | 1 | 1,00,730 | - | - | 4 | 1,47,176 | 1 | 15,00,000 | - | - | - | - | 5 | 3,06,721 |
| 4 | ದಾವಣಗೆರೆ | 1 | 15,00,000 | - | | - | | - | - | - | - | - | - | - | - | - | - |
| 5 | ಕೊಪ್ಪಳ | - | - | - | - | - | - | 13 | 3,10,000 | 1 | 15,00,000 | - | - | - | - | 16 | 5,04,853 |
| | ಒಟ್ಟು | 1 | 15,00,000 | 1 | 1,00,730 | - | - | 31 | 10,52,176 | 2 | 30,00,000 | - | - | - | - | 28 | 12,39,457 |
| ಚಾಮರಾಜನಗರ ವೃತ್ತ | | | | | | | | | | | | | | | | | |
| 1 | ಬಿ.ಆರ್.ಟಿ | 6 | 90,00,000 | - | - | - | - | 8 | 2,97,650 | 2 | 30,00,000 | - | - | - | - | 3 | 4,70,238 |
| 2 | ಎಂ.ಎಂ ಹಿಲ್ಸ್ | 3 | 30,00,000 | - | - | - | - | 17 | 3,56,973 | 2 | 15,00,000 | 2 | 20,00,000 | - | - | 6 | 2,36,000 |
| 3 | ಕಾವೇರಿ ವ.ಜೀ | 2 | 30,00,000 | - | - | 1 | 2,50,000 | 7 | 2,70,000 | 1 | 15,00,000 | - | - | - | - | 6 | 2,65,000 |
| | ಒಟ್ಟು | 11 | 1,50,00,000 | - | - | 1 | 2,50,000 | 32 | 9,24,623 | 5 | 60,00,000 | 2 | 20,00,000 | - | - | 17 | 9,71,238 |
| ಚಿಕ್ಕಮಗಳೂರು ವೃತ್ತ | | | | | | | | | | | | | | | | | |
| 1 | ಚಿಕ್ಕಮಗಳೂರು | 4 | 60,00,000 | - | - | - | - | 8 | 6,04,323 | 2 | 30,00,000 | - | - | - | - | 4 | 2,40,000 |
| 2 | ಕೊಪ್ಪ | - | - | - | - | - | - | 16 | 12,07,240 | 2 | 30,00,000 | - | - | - | - | 11 | 4,95,292 |
| 3 | ಭದ್ರಾ | 1 | 15,00,000 | - | - | - | - | - | - | 2 | 30,00,000 | - | - | - | - | - | - |
| | ಒಟ್ಟು | 5 | 75,00,000 | - | - | - | - | 24 | 18,11,563 | 6 | 90,00,000 | - | - | - | - | 15 | 7,35,292 |
| ಧಾರವಾಡ ವೃತ್ತ | | | | | | | | | | | | | | | | | |
| 1 | ಧಾರವಾಡ | - | - | - | - | - | - | 2 | 16,000 | - | - | - | - | - | - | - | - |
| 2 | ಗದಗ್ | - | - | - | - | - | - | 4 | 80,000 | - | - | - | - | - | - | 4 | 1,25,000 |
| 3 | ಹಾವೇರಿ | - | - | - | - | - | - | 4 | 1,25,109 | - | - | 1 | 10,00,000 | 1 | 5,00,000 | - | - |
| | ಒಟ್ಟು | - | - | - | - | - | - | 10 | 2,21,109 | - | - | 1 | 10,00,000 | 1 | 5,00,000 | 4 | 1,25,000 |
| ಗುಲ್ಬರ್ಗ ವೃತ್ತ | | | | | | | | | | | | | | | | | |
| 1 | ಬೀದರ್ | 1 | 15,00,000 | - | - | - | - | 17 | 5,71,716 | - | 0 | 1 | 5,00,000 | - | - | 8 | 2,85,786 |
| 2 | ಗುಲ್ಬರ್ಗ | 1 | 15,00,000 | - | - | - | - | 41 | 19,19,436 | - | - | - | - | 1 | 3,50,000 | 33 | 6,79,000 |
| 3 | ಯಾದಗಿರಿ | 1 | 15,00,000 | - | - | - | - | 10 | 5,40,000 | - | - | 1 | 10,00,000 | - | - | 11 | 1,05,000 |
| 4 | ರಾಯಚೂರು | - | - | 1 | 10,00,000 | - | - | - | - | 1 | - | - | - | - | - | 2 | 1,20,000 |
| | ಒಟ್ಟು | 3 | 45,00,000 | 1 | 10,00,000 | - | - | 68 | 30,31,152 | 1 | - | 2 | 15,00,000 | 1 | 3,50,000 | 54 | 11,89,786 |
| ಕೆನರಾ ವೃತ್ತ | | | | | | | | | | | | | | | | | |
| 1 | ದಾಂಡೇಲಿ | - | - | - | - | - | - | 1 | 60,000 | - | - | - | - | 1 | 5,00,000 | 1 | 59,500 |
| 2 | ಹಳಿಯಾಳ | - | - | - | - | - | - | 2 | 1,44,228 | - | - | - | - | - | - | - | - |
| 3 | ಹೊನ್ನಾವರ | - | - | | | | | 6 | 3,39,566 | - | - | - | - | - | - | 7 | 6,10,808 |
| 4 | ಕಾರವಾರ | - | - | - | - | - | - | 2 | 85,000 | - | - | - | - | - | - | 1 | 60,000 |
| 5 | ಶಿರಸಿ | - | - | - | - | - | - | 3 | 97,651 | - | - | - | - | - | - | 1 | 25,000 |
| 6 | ಯಲ್ಲಾಪುರ | 2 | 30,00,000 | | | 1 | 2,50,000 | 1 | 2,09,085 | - | - | - | - | 1 | 5,00,000 | 2 | 3,63,332 |
| | ಒಟ್ಟು | 2 | 30,00,000 | - | - | 1 | 2,50,000 | 15 | 9,35,530 | - | - | - | - | 2 | 10,00,000 | 12 | 11,18,640 |
| ಹಾಸನ ವೃತ್ತ | | | | | | | | | | | | | | | | | |
| 1 | ಹಾಸನ | 5 | 85,00,000 | - | - | - | - | 8 | 16,09,915 | 7 | 1,05,00,000 | - | - | - | - | 6 | 11,98,933 |
| 2 | ತುಮಕೂರು | - | - | - | - | - | - | 30 | 17,45,266 | - | - | - | - | 2 | 5,00,000 | 20 | 8,23,260 |
| | ಒಟ್ಟು | 5 | 85,00,000 | - | - | - | - | 38 | 33,55,181 | 7 | 1,05,00,000 | - | - | 2 | 5,00,000 | 26 | 20,22,193 |
| ಕೊಡಗು ವೃತ್ತ | | | | | | | | | | | | | | | | | |

| | | | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|---|
| 1 | ನಾಗರಹೊಳೆ | 5 | 75,00,000 | - | - | - | - | 11 | 6,04,009 | 3 | 45,00,000 | 1 | 10,00,000 | - | - | 10 | 4,00,660 |
| 2 | ಮಡಿಕೇರಿ | 6 | 75,00,000 | - | - | - | - | 4 | 7,08,469 | 1 | 15,00,000 | - | - | - | - | 4 | 2,38,000 |
| 3 | ವಿರಾಜಪೇಟೆ | 4 | 60,00,000 | - | - | - | - | 9 | 7,42,419 | 4 | 60,00,000 | 1 | 10,00,000 | - | - | 12 | 5,11,642 |
| 4 | ಮಡಿಕೇರಿ ವ.ಜೀ | - | - | - | - | - | - | 1 | 30,310 | - | - | - | - | - | - | 1 | 60,000 |
| | **ಒಟ್ಟು** | **15** | **2,10,00,000** | - | - | - | - | **25** | **20,85,207** | **8** | **1,20,00,000** | **2** | **20,00,000** | - | - | **27** | **12,10,302** |
| **ಮಂಗಳೂರು ವೃತ್ತ** | | | | | | | | | | | | | | | | | |
| 1 | ಮಂಗಳೂರು | 1 | 15,00,000 | - | - | 1 | 5,00,000 | 10 | 5,57,635 | - | - | - | - | - | - | 9 | 6,30,748 |
| 2 | ಕುಂದಾಪುರ | 1 | 15,00,000 | 1 | 2,50,000 | - | - | 4 | 73,343 | - | - | - | - | - | - | 7 | 3,45,773 |
| 3 | ಕುದುರೆಮುಖ | - | - | - | - | 1 | 5,00,000 | 1 | 60,000 | - | - | - | - | - | - | 3 | 1,50,000 |
| | **ಒಟ್ಟು** | **2** | **30,00,000** | **1** | **2,50,000** | **2** | **10,00,000** | **15** | **6,90,978** | - | - | - | - | - | - | **19** | **11,26,521** |
| **ಮೈಸೂರು ವೃತ್ತ** | | | | | | | | | | | | | | | | | |
| 1 | ಬಂಡೀಪುರ | 7 | 1,05,00,000 | 1 | 4,70,000 | - | - | 27 | 9,96,438 | 4 | 60,00,000 | - | - | 1 | 5,00,000 | 19 | 7,51,413 |
| 2 | ಮೈಸೂರು | 1 | 15,00,000 | - | - | - | - | 10 | 7,85,635 | 1 | 15,00,000 | - | - | - | - | 10 | 4,90,000 |
| 3 | ಹುಣಸೂರು | - | - | 2 | 7,50,000 | - | - | 3 | 4,66,302 | - | - | - | - | 1 | 5,00,000 | 1 | 60,000 |
| 4 | ಮಂಡ್ಯ | 1 | 15,00,000 | - | - | - | - | 2 | 60,000 | 1 | 15,00,000 | - | - | - | - | 5 | 6,85,000 |
| 5 | ಮೈಸೂರು ವ.ಜೀ | - | - | - | - | - | - | - | - | - | - | - | - | - | - | - | - |
| | **ಒಟ್ಟು** | **9** | **1,35,00,000** | **3** | **12,20,000** | - | - | **42** | **23,08,375** | **6** | **90,00,000** | - | - | **2** | **10,00,000** | **35** | **19,86,413** |
| **ಶಿವಮೊಗ್ಗ ವೃತ್ತ** | | | | | | | | | | | | | | | | | |
| 1 | ಭದ್ರಾವತಿ | 1 | 15,00,000 | - | - | - | - | 10 | 6,55,230 | - | - | - | - | - | - | 7 | 5,78,553 |
| 2 | ಸಾಗರ | - | - | - | - | - | - | 1 | 43,109 | - | - | - | - | - | - | 1 | 60,000 |
| 3 | ಶಿವಮೊಗ್ಗ | - | - | - | - | - | - | 2 | 90,000 | - | - | - | - | - | - | 3 | 1,02,395 |
| 4 | ಶಿವಮೊಗ್ಗ ವ.ಜೀ | 1 | 15,00,000 | - | - | - | - | - | - | 2 | 30,00,000 | - | - | - | - | | |
| | **ಒಟ್ಟು** | **2** | **30,00,000** | - | - | - | - | **13** | **7,88,339** | **2** | **30,00,000** | - | - | - | - | **11** | **7,40,948** |
| | **ಒಟ್ಟಾರೆ** | **65** | **9,55,00,000** | **6** | **25,70,730** | **4** | **15,00,000** | **347** | **1,87,24,882** | **46** | **6,60,00,000** | **10** | **85,32,000** | **10** | **38,54,347** | **278** | **1,38,05,318** |

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ(ವನ್ಯಜೀವಿ)
ಮತ್ತು ಮುಖ್ಯ ವನ್ಯಜೀವಿ ಪರಿಪಾಲಕರು
ಕರ್ನಾಟಕ, ಬೆಂಗಳೂರು.

FEE 320 FWL 2025

320 FWL 2025

ಅನುಬಂಧ-2

ವೃತ್ತ ಮತ್ತು ವಿಭಾಗವಾರು ವೈರ್‌ಲೆಸ್ ಉಪಕರಣಗಳ ವಿವರಗಳು

| ಕ್ರ. ಸಂ | ವೃತ್ತ | ವಿಭಾಗ | ನಿಸ್ತಂತು ಉಪಕರಣ 2025-26 | | | | |
|---|---|---|---|---|---|---|---|
| | | | Repeater | Static Sets | Mobile Stations | Walkie Talkies | Link Base |
| 1 | ಬೆಂಗಳೂರು | ರಾಮನಗರ | - | 1 | 13 | 13 | - |
| | | ಬನ್ನೇರುಘಟ್ಟ | 3 | 7 | 7 | 86 | 1 |
| 2 | ಬೆಳಗಾವಿ | ಬೆಳಗಾವಿ | 2 | 20 | 6 | 121 | 2 |
| 3 | ಬಳ್ಳಾರಿ | ವಿಜಯನಗರ | - | 3 | 7 | 38 | 2 |
| 4 | ಚಿಕ್ಕಮಗಳೂರು | ಚಿಕ್ಕಮಗಳೂರು | 4 | 5 | 6 | 63 | 2 |
| | | ಕೊಪ್ಪ | 3 | 12 | 14 | 120 | 2 |
| | | ಭದ್ರಾ ಹು.ಸಂ.ಪ್ರ. | 5 | 48 | 28 | 98 | 3 |
| 5 | ಚಾಮರಾಜನಗರ | ಬಿ.ಆರ್.ಟಿ. ಹು.ಸಂ.ಪ್ರ | 5 | 11 | 8 | 89 | 4 |
| | | ಮಲೈ ಮಹದೇಶ್ವರ ವಜೀ | 6 | 30 | 18 | 185 | 3 |
| | | ಕಾವೇರಿ ವಜೀ | 6 | 36 | 20 | 162 | 3 |
| 6 | ಧಾರವಾಡ | ಧಾರವಾಡ | 3 | 2 | 1 | 19 | 2 |
| | | ಗದಗ | 3 | 6 | 5 | 49 | 2 |
| 7 | ಹಾಸನ | ಹಾಸನ | 3 | 6 | 6 | 72 | 2 |
| 8 | ಕೊಡಗು | ಮಡಿಕೇರಿ (ಪ್ರಾ) | 4 | 4 | 5 | 45 | 1 |
| | | ವಿರಾಜಪೇಟೆ | 4 | 6 | 4 | 40 | 2 |
| | | ಮಡಿಕೇರಿ (ವಜೀ) | 4 | 2 | 2 | 22 | 2 |
| 9 | ಕೆನರಾ | ಕಾಳಿ ಹು.ಸಂ.ಪ್ರ. | 9 | 37 | 16 | 193 | 6 |
| | | ಹಳಿಯಾಳ | 4 | 7 | 7 | 35 | 4 |
| | | ಹೊನ್ನಾವರ | 4 | 6 | 6 | 30 | 4 |
| 10 | ಮೈಸೂರು | ಮೈಸೂರು | 2 | 3 | 5 | 50 | 1 |
| 11 | ಶಿವಮೊಗ್ಗ | ಶಿವಮೊಗ್ಗ | 3 | 5 | 5 | 45 | 1 |
| | | ಭದ್ರಾವತಿ | 4 | 8 | 4 | 70 | 2 |
| | | ಸಾಗರ | 4 | 5 | 5 | 67 | 2 |
| | | ಶಿವಮೊಗ್ಗ ವಜೀ | 4 | 6 | 5 | 55 | 2 |
| 12 | ಮಂಗಳೂರು | ಕುಂದಾಪುರ | 4 | 7 | 7 | 40 | 4 |
| | | ಕಾರ್ಕಳ ವಜೀ ವಿಭಾಗ | 5 | 19 | 15 | 120 | 4 |
| 13 | ಕ್ಷೇತ್ರ ನಿರ್ದೇಶಕರು, ಹುಲಿ ಯೋಜನೆ ಮೈಸೂರು | ನಾಗರಹೊಳೆ ಹು.ಸಂ.ಪ್ರ | 8 | 28 | 19 | 216 | 6 |
| | | ಬಂಡೀಪುರ ಹು.ಸಂ.ಪ್ರ | 5 | 27 | 34 | 282 | 4 |
| ಒಟ್ಟು | | | 111 | 357 | 278 | 2425 | 73 |

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ವನ್ಯಜೀವಿ), ಮತ್ತು ಮುಖ್ಯ ವನ್ಯಜೀವಿ ಪರಿಪಾಲಕರು
ಕರ್ನಾಟಕ, ಬೆಂಗಳೂರು

ಅನುಬಂಧ-2

ವೃತ್ತವಾರು ಶಸ್ತ್ರಾಸ್ತ್ರಗಳ ವಿವರ

| ನವೆಂಬರ್-2025 ರಂತೆ ಶಸ್ತ್ರಾಸ್ತ್ರಗಳ ವಿಧಗಳು | | | | | | | | | | | | |
|---|---|---|---|---|---|---|---|---|---|---|---|---|
| ಕ್ರ. ಸಂ | ವೃತ್ತ | ಡಿ.ಬಿ.ಬಿ.ಎಲ್. ಬಂದೂಕುದ | ಎಸ್.ಬಿ.ಬಿ.ಎಲ್ ಬಂದೂಕುದ | ಜರುಗಿಸುವವ ಕ್ರಮ | ನೀರು ಮೇಲೆತ್ತುವ ಬಂದೂಕು | 0.32 ಪಿಸ್ತೂಲ್ | 0.32 ರಿವಾಲ್ವರ್ | 0.38 ರಿವಾಲ್ವರ್ | ರೈಫಲ್ 0.303 | ರೈಫಲ್ 0.315 | 0.410 ಮಸ್ಕೆಟ್ | 0.9 ಎಮ್.ಎಮ್. ಪಿಸ್ತೂಲ್ |
| 1 | ಬೆಂಗಳೂರು | 60 | 7 | 43 | 12 | - | 2 | 3 | 6 | 11 | - | 2 |
| 2 | ಬೆಳಗಾವಿ | 52 | - | 11 | 2 | 2 | 2 | 1 | 14 | 5 | - | - |
| 3 | ಬಳ್ಳಾರಿ | 31 | 5 | 3 | 4 | 1 | 3 | - | 3 | 1 | - | 3 |
| 4 | ಚಿಕ್ಕಮಗಳೂರು | 62 | - | 62 | 14 | - | 3 | - | - | 21 | - | 2 |
| 5 | ಚಾಮರಾಜನಗರ | 148 | 1 | 79 | 31 | 5 | 11 | - | 61 | - | - | 7 |
| 6 | ಧಾರವಾಡ | 45 | - | 1 | 4 | - | 1 | - | 15 | - | - | 2 |
| 7 | ಕಲಬುರಗಿ | 21 | - | 2 | 2 | - | - | - | - | - | - | 1 |
| 8 | ಹಾಸನ | 47 | - | 7 | 14 | - | 2 | 1 | 19 | - | - | 2 |
| 9 | ಕೊಡಗು | 57 | 3 | 47 | 10 | 1 | - | 3 | - | 18 | - | 1 |
| 10 | ಕೆನರಾ | 122 | 2 | 67 | 3 | 1 | 5 | - | - | 34 | - | 2 |
| 11 | ಮೈಸೂರು | 55 | - | 25 | 5 | 3 | - | - | - | 28 | - | - |
| 12 | ಶಿವಮೊಗ್ಗ | 113 | - | 31 | 4 | 3 | 4 | 1 | - | 43 | - | - |
| 13 | ಮಂಗಳೂರು | 62 | - | 42 | - | - | 4 | 1 | 4 | 40 | 4 | 3 |
| 14 | ಕ್ಷೇತ್ರ ನಿರ್ದೇಶಕರು, ಹುಲಿ ಯೋಜನೆ ಮೈಸೂರು | 139 | - | 73 | 35 | 7 | 5 | - | - | 39 | - | 3 |
| | ಒಟ್ಟು | 1014 | 18 | 493 | 140 | 23 | 42 | 10 | 122 | 240 | 4 | 28 |

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ವನ್ಯಜೀವಿ), ಮತ್ತು ಮುಖ್ಯ ವನ್ಯಜೀವಿ ಪರಿಪಾಲಕರು
ಕರ್ನಾಟಕ, ಬೆಂಗಳೂರು